1

<u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>

ದೀಪಾಂಜಲಿನಗರ, ವಾರ್ಡ್ ಸಂಖ್ಯೆ-158, ಪಾಲಿಕೆ ಸದಸ್ಯರ ಕಛೇರಿ, 8ನೇ ಮುಖ್ಯರಸ್ತೆ, ಆವಲಹಳ್ಳಿ ಬಿಡಿಎ ಬಡಾವಣೆ,
(ಅಭಯ ಆಂಜನೇಯ ದೇವಸ್ಥಾನ ಹತ್ತಿರ) ಬೆಂಗಳೂರು-560 026

---

ಸಂಖ್ಯೆ: ಸ.ಕಾ.ನಿ.ಅ/ಗಾಳ/ಪಿಆರ್/ 160/A/22-23 ದಿನಾಂಕ:-04-06-2022

ವಾರ್ಡ್ ಸಂಖ್ಯೆ : 158 ವಾರ್ಡ್ ಸಭೆಯ ನಡವಳಿ

**ಸಭೆಗೆ ಹಾಜರಾಗಿ ಭಾಗವಹಿಸಿದ ಸದಸ್ಯರು ಮತ್ತು ಸಾರ್ವಜನಿಕರ ವಿವರ:**

| ಕ್ರಮ ಸಂಖ್ಯೆ | ಅಧಿಕಾರಿಗಳು ಮತ್ತು ಸದಸ್ಯರುಗಳ ಹೆಸರು | ಪದನಾಮ/ಅಧ್ಯಕ್ಷರು | ಹಾಜರಾತಿ |
|---|---|---|---|
| 1 | ಶ್ರೀ. ಜಯಶಂಕರ್ | ನೊಡೇಲ್ ಅಧಿಕಾರಿ | ಹಾಜರಾಗಿರುತ್ತಾರೆ |
| 2 | ಶ್ರೀಮತಿ. ಚೈತ್ರ .ಜಿ.ಎಸ್. | ಕಾರ್ಯದರ್ಶಿ | ಹಾಜರಾಗಿರುತ್ತಾರೆ |
| 3 | ಶ್ರೀ. ಹೆಚ್. ಮಂಜುನಾಥ್ | ಕಿರಿಯ ಆರೋಗ್ಯ ಪರಿವೀಕ್ಷಕರು | ಹಾಜರಾಗಿರುತ್ತಾರೆ |
| 4 | ಶ್ರೀ. ಹೆಚ್.ಕೆ. ಕೃಷ್ಣಪ್ಪ | ಬಿ.ಡಬ್ಲ್ಯೂ.ಎಸ್.ಎಸ್.ಬಿ. (ಸ.ಅ) | ಹಾಜರಾಗಿರುತ್ತಾರೆ |
| 5 | ಶ್ರೀ. ಎನ್.ಟಿ. ಲಕ್ಷ್ಮೀ ನರಸಿಂಹಯ್ಯ | ತೋಟಗಾರಿಕೆ ಇಲಾಖೆ | ಹಾಜರಾಗಿರುತ್ತಾರೆ |
| 6 | ಶ್ರೀಮತಿ. ಸುಮಿತ್ರ .ಕೆ.ಎಸ್. | ಬೆಸ್ಕಾಂ ಡಬ್ಲ್ಯೂ6 (ಕಿ.ಅ) | ಹಾಜರಾಗಿರುತ್ತಾರೆ |
| 7 | ಶ್ರೀ. ಅಭಿಲಾಶ್ .ಎನ್. | ಕಂದಾಯ ಇಲಾಖೆ | ಹಾಜರಾಗಿರುತ್ತಾರೆ |
| 8 | ಶ್ರೀ. ಕುಮಾರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ. (ಕೆ.ಪ) | ಹಾಜರಾಗಿರುತ್ತಾರೆ |

<u>**ಸಭೆಗೆ ಹಾಜರಿದ್ದ ಸಾರ್ವಜನಿಕರು**</u>

1. ಶ್ರೀ. ಸುನಿಲ್
2. ಶ್ರೀ. ಮಧು
3. ಶ್ರೀ. ಆನಂದ್ ಕುಮಾರ್ .ಬಿ.
4. ಶ್ರೀ. ಗಿರೀಶ್
5. ಶ್ರೀಮತಿ. ನವ್ಯಶ್ರಿ
6. ಶ್ರೀಮತಿ. ರಾಜೇಶ್ವರಿ .ಬಿ.ಟಿ.

ಸಮಿತಿಯ ಕಾರ್ಯದರ್ಶಿಯವರು ಹಾಜರಿದ್ದ ಎಲ್ಲಾ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಮತ್ತು ಸದಸ್ಯರುಗಳಿಗೆ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತ ಕೋರಿದ ನಂತರ ಸಭೆಯನ್ನು ಆರಂಭಿಸಲಾಯಿತು.

ಈ ಹಿಂದಿನ ಸಭೆಯಲ್ಲಿ ಬಂದಿದ್ದ ದೂರುಗಳ ಮೇಲೆ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸುತ್ತ ಪ್ರಸ್ತುತ ಕುಂದು ಕೊರತೆಗಳ ಬಗ್ಗೆ ಚರ್ಚೆ ಪ್ರಾರಂಭಿಸಲಾಯಿತು.

ವೀರಭದ್ರನಗರ ಸರ್ವೀಸ್ ರಸ್ತೆಯಲ್ಲಿ ಟೆಂಪೋಗಳು, ಆಟೋಗಳು ಇದ್ದು ಇದರಿಂದ ಕೆಲಸ ಮಾಡಲು ತೊಂದರೆಯಾಗುತ್ತಿದೆ ಎಂದು ಮತ್ತು ಎಸ್.ಎಲ್.ವಿ. ಪಾರ್ಟಿ ಹಾಲ್ ಹತ್ತಿರ ಹಳೆ ವಾಹನಗಳು ಇದ್ದು ಇದನ್ನು ಸಹ ತೆರವುಗೊಳಿಸಲು ಸಭೆಯಲ್ಲಿ ತಿಳಿಸಿದರು. ಸದರಿ ವಾಹನಗಳನ್ನು ಕೂಡಲೇ ತೆರವುಗೊಳಿಸುವುದಾಗಿ ಟ್ರಾಫಿಕ್ ಅಧಿಕಾರಿರವರು ತಿಳಿಸಿದರು.

**ಕ್ರಮ : ಪೊಲೀಸ್ ಇಲಾಖೆ**

ಎಸ್.ಎಲ್.ವಿ. ಪಾರ್ಟಿ ಹಾಲ್ ಹತ್ತಿರ ಡೆಬ್ರಿಸ್ ತೆರವುಗೊಳಿಸುವಂತೆ ತಿಳಿಸಿದರು, ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವನ್ನು ಕೈಗೊಳ್ಳಲು ತಿಳಿಸಲಾಗುವುದು ಎಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಘನತ್ಯಾಜ್ಯ ನಿರ್ವಹಣೆ ಕೋಶ**

ಮೈಸೂರು ರಸ್ತೆಯಲ್ಲಿ ಬೀದಿ ದೀಪದ ಸಮಸ್ಯೆ ಇದೆ ಎಂದು ಟ್ರಾಫಿಕ್ ಇನ್ಸ್‌ಫೆಕ್ಟರ್ ರವರು ತಿಳಿಸಿದರು. ಸದರಿ ವಿಷಯದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವನ್ನು ಕೈಗೊಳ್ಳಲು ತಿಳಿಸಲಾಗುವುದು ಎಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಬೀದಿ ದೀಪಗಳ ಇಲಾಖೆ**

5ನೇ ಅಡ್ಡರಸ್ತೆ, ಈರಣ್ಣ ಗುಡ್ಡೆಯಲ್ಲಿ ಮರವನ್ನು ತೆರವುಗೊಳಿಸಿರುವುದಿಲ್ಲವೆಂದು ತಿಳಿಸಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಮರವನ್ನು ತೆರವುಗೊಳಿಸುವಂತೆ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಅರಣ್ಯ ಇಲಾಖೆ**

20ನೇ ಅಡ್ಡರಸ್ತೆ, ಈರಣ್ಣಗುಡ್ಡೆ ರಾಜ ಕಾಲುವೆ ಹತ್ತಿರ ನೀರು ಸರಿಯಾಗಿ ಹೋಗುವಂತೆ ಹೋಲ್ ಹಾಕಿಸುವಂತೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಬಗ್ಗೆ ಕ್ರಮವನ್ನು ಕೈಗೊಳ್ಳುವುದಾಗಿ ತಿಳಿಸಿದರು.

**ಕ್ರಮ : ಕಾಮಗಾರಿ ಇಲಾಖೆ**

F4

ತೋಟಗಾರಿಕೆ ಇಲಾಖೆಯವರಿಗೆ ಪಾರ್ಕ್‌ನಲ್ಲಿ ಕೆಲಸ ನಿರ್ವಹಿಸುವ ಬಗ್ಗೆ ಕಾರ್ಯಾದೇಶದ ಪ್ರತಿಯನ್ನು ತಂದುಕೊಡುವಂತೆ ತೋಟಗಾರಿಕೆ ಅಧಿಕಾರಿಗಳಿಗೆ ತಿಳಿಸಲಾಯಿತು.

**ಕ್ರಮ : ತೋಟಗಾರಿಕೆ ಇಲಾಖೆ**

ಬೆಸ್ಕಾಂ ಇಲಾಖೆಯವರು ಮರಗಳನ್ನು ಕಟಾವು ಮಾಡಿ ಅಲ್ಲಿಯೇ ಬಿಸಾಡಿ ಹೋಗಿರುವುದು ಕಂಡುಬಂದಿದ್ದು ಅದನ್ನು ಬೆಸ್ಕಾಂ ಇಲಾಖೆಯವರು ತೆರವುಗೊಳಿಸುವಂತೆ ತಿಳಿಸಿದರು. ಸದರಿ ವಿಷಯದ ಬಗ್ಗೆ ಕ್ರಮವನ್ನು ಕೈಗೊಳ್ಳುವುದಾಗಿ ನೋಡೆಲ್ ಅಧಿಕಾರಿ ರವರು ತಿಳಿಸಿದರು.

**ಕ್ರಮ : ಬೆಸ್ಕಾಂ ಇಲಾಖೆ**

ಸಭೆಯನ್ನು ಕಾರ್ಯದರ್ಶಿಗಳಾದ ಶ್ರೀಮತಿ. ಚೈತ್ರ .ಜಿ.ಎಸ್. ರವರು ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಿದರು.

04/06/22

ಕಾರ್ಯದರ್ಶಿ

ವಾರ್ಡ್ ಸಂಖ್ಯೆ : 158 (ದೀಪಾಂಜಲಿನಗರ)

**ಪ್ರತಿಯನ್ನು:-**

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
4. ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.